ಪಶ್ಚಿಮ ಘಟ್ಟವನ್ನು ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿಸುವ

70 (489), **ಶ್ರೀ ಸುರೇಶ್ ಗೌಡ(ನಾಗಮಂಗಲ)**

ಪ್ರಶ್ನೆ

ಅ) ಪಶ್ಚಿಮ ಘಟ್ಟವನ್ನು ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಈ ಪ್ರಸ್ತಾವನೆಯನ್ನು ಅಂಗೀಕರಿಸಿದಲ್ಲಿ ರಾಜ್ಯಕ್ಕೆ ಆಗುವ ಪ್ರಯೋಜನೆವೇನು?

ಆ) ಈ ಪ್ರಸ್ತಾವನೆಯನ್ನು ಅಂಗೀಕರಿಸಿದಲ್ಲಿ ಜನರಿಗೆ ಆಗುವ ತೊಂದರೆಗಳೇನು; ಹಾಲಿ ಇರುವ ವಸ್ತುಸ್ಥಿತಿ ಏನು?

ಶ್ರೀ ಪಿ.ಪಿ.ಯೋಗೇಶ್ವರ್ (ಅರಣ್ಯ ಸಚಿವರು)

ಉತ್ತರ

ಅ) ಪ್ರಸ್ತಾವನೆ ಕರ್ನಾಟಕ ಸರ್ಕಾರದ ಮುಂದೆ ಇರುವುದಿಲ್ಲ. ಆದರೆ, ಈ ಕೆಳಕಂಡ ಪಶ್ಚಿಮ ಘಟ್ಟ ಪ್ರದೇಶದ ಹತ್ತು ತಾಣಗಳನ್ನು ಯುನೆಸ್ಕೋ ಪಟ್ಟಿಯಲ್ಲಿ ಸೇರಿಸಲು Wildlife Institute of Indiaಇವರು ಪ್ರಸ್ತಾಪಿಸಿದ್ದು, ಅವುಗಳು ಈ ಕೆಳಗಿನಂತೆ ಇರುತ್ತವೆ.

1	ಪುಷ್ಪಗಿರಿ ವನ್ಯಧಾಮ
2	ಬ್ರಹ್ಮ ಗಿರಿ ವನ್ಯಧಾಮ
3	ತಲಕಾವೇರಿ ವನ್ಯಧಾಮ
4	ಪರಿನಾಲ್ಕಡನ್ ಮೀಸಲು ಅರಣ್ಯ
5	ಕೆರಟಿ ಮೀಸಲು ಅರಣ್ಯ
6	ಕುದುರೆಮುಖ ರಾಷ್ಟ್ರೀಯ ಉದ್ಯಾನವನ
7	ಸೋಮೇಶ್ವರ ವನ್ಯಧಾಮ
8	ಸೋಮೇಶ್ವರ ಮೀಸಲು ಅರಣ್ಯ
9	ಆಗುಂಬೆ ಮೀಸಲು ಅರಣ್ಯ
10	ಬಾಳೆಹಳ್ಳಿ ಮೀಸಲು ಅರಣ್ಯ

ಇದರಿಂದ ರಾಜ್ಯಕ್ಕೆ ಆಗುವ ಲಾಭ ಮತ್ತು ಪ್ರಯೋಜನಗಳು ಈ ಕೆಳಗಿನಂತೆ ಇರುತ್ತವೆ.

1 ಪಶ್ಚಿಮ ಘಟ್ಟದ ಅರಣ್ಯಗಳಿಗೆ ಪಾರಂಪರಿಕ ತಾಣವೆಂದು ವಿಶ್ವಮಾನ್ಯತೆ ದೊರೆತಿದೆ.

2 ಜೀವ ವೈವಿದ್ಯತೆಯನ್ನು ಸಂರಕ್ಷಿಸಲು ಸಹಕಾರಿಯಾಗುವುದು.

3 ವಿಶ್ವ ಮಾನ್ಯತೆ ದೊರೆತಿರುವುದರಿಂದ, ಪರಿಸರ ಪ್ರವಾಸೋದ್ಯಮದ ಬೆಳೆವಣಿಗೆಯಾಗುವುದು, ಇದರಿಂದ ಸ್ಥಳೀಯ ಜನರ ಆರ್ಥಿಕ ಮಟ್ಟ ಸುಧಾರಿಸಲು ಸಹಕಾರಿಯಾಗುವುದು.

4 ವಿಶ್ವ ಮಾನ್ಯತೆಯನ್ನು ಹೊಂದಿರುವುದರಿಂದ ಇಂತಹ ಪ್ರದೇಶಗಳ ಅಭಿವೃದ್ಧಿಗೆ ಅಂತರರಾಷ್ಟ್ರೀಯ ನೆಲೆಯಲ್ಲಿ ಹಣಕಾಸು ನೆರವು ದೊರೆಯಬಹುದು.

5 ಈಗಿರುವ ಕಾನೂನುಗಳೇ ಇಂತಹ ತಾಣದ ರಕ್ಷಣೆಗೆ ಮುಂದುವರೆಯಲಿದೆ.

ಆ) ಪಶ್ಚಿಮ ಘಟ್ಟ ಪ್ರದೇಶಗಳನ್ನು ವಿಶ್ವ ಪರಂಪರಾಗತ ತಾಣವನ್ನಾಗಿ ಘೋಷಣೆ ಮಾಡಿದಲ್ಲಿ ಆದಿವಾಸಿ ಸಮುದಾಯದ ಸಾಂಸ್ಕೃತಿಕ ಬದುಕಿಗೆ ನಿರ್ಬಂಧವನ್ನು ಹೇರಿದಂತೆ ಆಗುತ್ತಿದೆ ಎಂದು ಆದಿವಾಸಿ ಸಮುದಾಯಗಳು ವಿರೋಧ ವ್ಯಕ್ತಪಡಿಸುತ್ತಿವೆ.

ಕರ್ನಾಟಕ ರಾಜ್ಯದ ಪಶ್ಚಿಮ ಘಟ್ಟದ ರಾಷ್ಟ್ರೀಯ ಉದ್ಯಾನವನ/ ಅಭಯಾರಣ್ಯ ಹಾಗೂ ಕಾಯ್ದಿಟ್ಟ ಅರಣ್ಯಗಳನ್ನು ರಕ್ಷಿಸುವುದಕ್ಕೆ ವನ್ಯಜೀವಿ(ಸಂರಕ್ಷಣೆ) ಕಾಯ್ದೆ, ಕರ್ನಾಟಕ ಅರಣ್ಯ ಕಾಯ್ದೆ ಮತ್ತು ಮುಂತಾದ ಕಾಯ್ದೆಗಳಿಂದ ನಿರ್ವಹಣೆ, ರಕ್ಷಣೆ ಮಾಡಲು ಸಾಕಷ್ಟು ಅವಕಾಶವಿರುತ್ತದೆ. ಆದುದರಿಂದ ಯುನೆಸ್ಕೋ (UNESCO) ಪಟ್ಟಿಯಲ್ಲಿ ಸೇರಿಸದೆ ಇದ್ದರೂ ಕೂಡ ಈ ಪ್ರದೇಶಗಳನ್ನು ಸಮರ್ಪಕವಾಗಿ ನಿರ್ವಹಿಸಬಹುದು.